## TRAINING

### ಇಲಾಖಾ " ಸಿ " ವೃಂದದ ನೌಕರರಿಗೆ ತರಬೇತಿ ನೀಡಿಕೆ ಕುರಿತು

**ಪೀಠಿಕೆ:-**

ಮೈಸೂರು ವಿಭಾಗದ ಪ್ರಸ್ತುತ ಪ್ರಾದೇಶಿಕ ಆಯುಕ್ತರಾದ ಶ್ರೀಮತಿ.ಎಂ.ವಿ.ಜಯಂತಿ, ಭಾ.ಆ.ಸೇ. ರವರು ಪ್ರಾದೇಶಿಕ ಆಯುಕ್ತರಾಗಿ 2008 ರ ಜೂನ್ ಮಾಹೆಯಲ್ಲಿ ಅಧಿಕಾರ ವಹಿಸಿಕೊಂಡ ನಂತರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್‌ರುಗಳ ಪ್ರತ್ಯೇಕ ಸಭೆಯನ್ನು ವಿಭಾಗ ಮಟ್ಟದಲ್ಲಿ ನಡೆಸಿದ ಸಂದರ್ಭದಲ್ಲಿ ಇಲಾಖೆಯ ವಿವಿಧ ಕೆಲಸ ಕಾರ್ಯಗಳು ಹಾಗೂ ಕಾರ್ಯಕ್ರಮಗಳು ಪ್ರಗತಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಕಂದಾಯ ಇಲಾಖೆಯಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ " ಸಿ " ವೃಂದದ ನೌಕರರುಗಳ ಪೈಕಿ ಗಣನೀಯ ಸಂಖ್ಯೆಯ ನೌಕರರುಗಳು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿರುವ ನೌಕರರಾಗಿದ್ದು, ಈ ನೌಕರರುಗಳಿಗೆ ಹಾಗೂ ಇಲಾಖೆಯ ಇತರೆ ಸಿಬ್ಬಂದಿಗಳಿಗೆ ಇಲಾಖೆಯ ಕೆಲಸ ಕಾರ್ಯಗಳು, ಕಾರ್ಯಕ್ರಮಗಳು, ಇಲಾಖೆಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳು, ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳು ಇವುಗಳ ಕುರಿತು ಅಗತ್ಯ ಅರಿವು ಮೂಡಿಸುವ ಅವಶ್ಯಕತೆಯನ್ನು ಗಮನಿಸಿ ತರಬೇತಿ ಕಾರ್ಯಕ್ರಮ ರೂಪಿಸಲಾಯಿತು.

ಯಾವುದೇ ಸಂಸ್ಥೆ / ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುವ ನೌಕರರುಗಳಿಗೆ ಅವರ ಕಾರ್ಯವ್ಯಾಪ್ತಿ, ಜವಾಬ್ದಾರಿ ಮತ್ತು ಕೆಲಸ ಕಾರ್ಯಗಳ ನಿರ್ವಹಣೆ ಸಂಬಂಧ ಅನುಸರಿಸಬೇಕಾದ ವಿಧಿ ವಿಧಾನಗಳ ಕುರಿತು ಕಾಲಕಾಲಕ್ಕೆ ತರಬೇತಿ ಶಿಬಿರಗಳನ್ನು ಏರ್ಪಡಿಸುವುದರ ಮೂಲಕ ನೌಕರರುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಬಹುದಾಗಿದೆ ಹಾಗೂ ತನ್ಮೂಲಕ ಇಲಾಖೆಯ ಕೆಲಸ ಕಾರ್ಯಗಳು ಸುಗಮವಾಗಲು ಸಹಕಾರಿಯಾಗುತ್ತದೆ ಎಂಬ ವಾಸ್ತವಿಕತೆಯ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ " ಸಿ " ವೃಂದದ ನೌಕರರುಗಳಿಗೆ ಇಲಾಖೆಯ ಕೆಲಸ ಕಾರ್ಯಗಳ ಕುರಿತು ಪ್ರತ್ಯೇಕ ತರಬೇತಿ ಶಿಬಿರಗಳನ್ನು ಆಯೋಜಿಸುವ ಕುರಿತು ಚಿಂತನೆ ನಡೆಸಲಾಯಿತು.

ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಯುಕ್ತರ ಕಛೇರಿಯಿಂದ ತೆಗೆದುಕೊಳ್ಳಬೇಕಾದ ಹಾಗೂ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಪರಿಶೀಲಿಸಲಾಯಿತು. ಸರ್ಕಾರ ಆದೇಶ ಸಂಖ್ಯೆ:ಕಂಇ 09 ಬಿಎಂಎಂ 2003 ದಿನಾಂಕ:8-9-2005 ರ ಮೇರೆಗೆ ಸ್ಥಾಪನೆಯಾಗಿರುವ ಪ್ರಾದೇಶಿಕ ಆಯುಕ್ತರ ಕಛೇರಿಯ ಕಾರ್ಯನಿರ್ವಹಣೆಯ ಅಂಶಗಳ ಪೈಕಿ ತರಬೇತಿಯ ವಿಷಯವು

ಒಂದಾಗಿದ್ದು ಅದರಂತೆ ಇಲಾಖೆಯ ಅಧಿಕಾರಿಗಳಿಗೆ ಹಾಗೂ ನೌಕರರುಗಳಿಗೆ ಇಲಾಖೆಯ ಕೆಲಸ ಕಾರ್ಯಗಳ ಕುರಿತು ತರಬೇತಿ ನೀಡುವ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಕ್ರಮವಹಿಸಲಾಯಿತು.

ಪ್ರಸಕ್ತ ಅಂದರೆ 2008-09 ನೇ ಸಾಲಿನಲ್ಲಿ ಉಳಿದಿರುವ ಅವಧಿಯಲ್ಲಿ ನಡೆಸಬಹುದಾದ ತರಬೇತಿ, ತರಬೇತಿ ಸಂಸ್ಥೆಗಳು, ತರಬೇತಿಯ ಅವಧಿ ಇವುಗಳ ಕುರಿತು ತೀರ್ಮಾನ ತೆಗೆದು ಕೊಳ್ಳಲು ಮೈಸೂರು, ಮಂಡ್ಯ, ಹಾಸನ ಮತ್ತು ಮಂಗಳೂರಿನ ಜಿಲ್ಲಾ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳ ಸಭೆಯನ್ನು ಕರೆದು ಚರ್ಚಿಸಿ ನಂತರ ಆಯ್ದ ವಿಷಯಗಳ ಕುರಿತು ಮೂರು ದಿನಗಳ ತರಬೇತಿ ಶಿಭಿರಗಳನ್ನು ಮೇಲೆ ಹೇಳಿದ ನಾಲ್ಕು ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ನಡೆಸಲು ತೀರ್ಮಾನಿಸಲಾಯಿತು.

## ಪ್ರಥಮ ಹಂತದಲ್ಲಿ ತರಬೇತಿಗೆ ಆಯ್ದುಕೊಂಡ ವಿಷಯಗಳು

## ಶಿರಸ್ತೇದಾರ್ / ಉಪತಹಶೀಲ್ದಾರ್ , ರಾಜಸ್ವ ನಿರೀಕ್ಷಕರು / ಪ್ರಥಮ ದರ್ಜೆ ಸಹಾಯಕರು , ದ್ವಿತೀಯ ದರ್ಜೆ ಸಹಾಯಕರು / ಗ್ರಾಮಲೆಕ್ಕಾಧಿಕಾರಿ ತರಬೇತಿ ನೀಡುವ ಬಗ್ಗೆ ವಿಷಯ ಸೂಚಿ

1) ಗ್ರಾಮಲೆಕ್ಕಿಗರು / ರಾಜಸ್ವ ನಿರೀಕ್ಷಕರ ಜವಾಬ್ದಾರಿಗಳು
2) ಹಕ್ಕು ಬದಲಾವಣೆ ಸಂದರ್ಭಗಳು, ವಿವಾದಾಸ್ಪದ ಪ್ರಕರಣಗಳು
3) ಅನ್ಯ ಸಂಕ್ರಮಣ (Alienation) ಕೃಷಿ ಜಮೀನು / ಕೃಷಿಯೇತರ ಉದ್ದೇಶ ಬಳಕೆಗೆ ಷರತ್ತುಗಳು - ಉಲ್ಲಂಘನೆ ಕ್ರಮ ಪಿ.ಟಿ.ಸಿ.ಎಲ್. ಕಾಯ್ದೆಯ ಮುಖ್ಯಾಂಶಗಳು
4) ಆದಾಯ ಮತ್ತು ಜಾತಿ ಪತ್ರಗಳ ನೀಡಿಕೆ - ಗ್ರಾಮಲೆಕ್ಕಾಧಿಕಾರಿಗಳ ಜವಾಬ್ದಾರಿ
5) ಪ್ರಾಕೃತಿಕ ವಿಕೋಪಗಳು - ಪರಿಹಾರ ಪಾವತಿಗೆ ಕಡತ / ದಾಖಲೆ ನಿರ್ವಹಣೆ
6) ಮಾಸಾಶನಗಳು - ಕಡತ ತಯಾರಿಕೆ - ದಾಖಲೆ ಸಿದ್ದಪಡಿಸುವಲ್ಲಿ ಗಮನಿಸಬೇಕಾದ ಅಂಶಗಳು
7) ಭೂ ಸ್ವಾಧೀನ ಪ್ರಕ್ರಿಯೆ - ಕಡತಗಳ ತಯಾರಿಕೆ - ಕಂದಾಯ ನೌಕರರ ಪಾತ್ರ.
8) ದಪ್ತರ್ ತಪಾಸಣೆ - ಗ್ರಾಮಲೆಕ್ಕಗಳ ಪರಿಶೀಲನೆ - ತಪಾಸಣಾ ವರದಿ - ಕಂಡಿಕೆಗಳಿಗೆ ಅನುವರ್ತನಾ ವರದಿ ಸಲ್ಲಿಕೆ ಬಗ್ಗೆ
9) ಮಾಹಿತಿ ಹಕ್ಕು ಅಧಿನಿಯಮ 2005ರ ಮುಖ್ಯಾಂಶಗಳು

10) ಕಾನೂನು ಮತ್ತು ಸುವ್ಯವಸ್ಥೆ - ಶಿಷ್ಠಾಚಾರ ವಿಚಾರಗಳು
11) ಮಾನಸಿಕ ಒತ್ತಡ ನಿರ್ವಹಣೆ - ಸರಳ ವಿಚಾರಗಳು
12) ಸರ್ಕಾರಿ ಆಸ್ತಿಗಳ ರಕ್ಷಣೆ ಮತ್ತು ಸರ್ಕಾರಿ ಕೆರೆಗಳ ಉಪಯೋಗ, ಒತ್ತುವರಿ ಮತ್ತು ನಿರ್ವಹಣೆ
13) ಭೂ ಸುಧಾರಣೆ ಕಾಯ್ದೆ 79ಎ, 79ಬಿ, 80, 81, 82 ಮತ್ತು 83 ಮತ್ತು Offence and penalties (ಅಪರಾಧಗಳು ಮತ್ತು ದಂಡನೆಗಳು) ಹೆಚ್ಚುವರಿ ಭೂಮಿ ಹಂಚಿಕೆ (ವಿಧಿ 77 ಮತ್ತು ನಿಯಮ 26, 26AA, 26B, 26c)
14) ಪ್ರವಾಸ ಕಾರ್ಯಕ್ರಮ ಮತ್ತು ದಿನಚರಿ
15) ಭೂ ಮಾಪನ ಕಾರ್ಯ - ಸರ್ವೆ ನಂಬರ್‌ಗಳ ವಿಭಜನೆ - ಪ್ರತಿ ಪೋಡಿನ ಹದ್ದುಬಸ್ತನ್ನು ಪತ್ತೆ ಹಚ್ಚುವಿಕೆ
16) ಇ-ಮೇಲ್ ಭೂಮಿ - ಕಂಪ್ಯೂಟರ್ ತರಬೇತಿ
17) ಸಮರ್ಥ ಆಡಳಿತ
18) ಬಾಲ ಕಾರ್ಮಿಕ ಕಾಯಿದೆ
19) ಸರ್ಕಾರಿ ಭೂಮಿಯ ಲೀಸ್ ಮಂಜೂರಾತಿ ಹಾಗೂ ಲೀಸ್ ಮುಕ್ತಾಯದ ಅವಧಿವರೆವಿಗೆ ಕಡತಗಳು ಹಾಗೂ ವಹಿಗಳ ನಿರ್ವಹಣೆ

**ಅನುದಾನ:-**

ತರಬೇತಿ ಶಿಬಿರಗಳ ಆಯೋಜನೆಗಾಗಿ 2008-09 ನೇ ಸಾಲಿಗೆ 6 ಲಕ್ಷ ರೂ.ಗಳ ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿ ಸರ್ಕಾರವು ಈ ಕಛೇರಿಗೆ ನೀಡಲಾದ ಯೋಜನೇತರ ವೆಚ್ಚದ ಅನುದಾನದ ಪೈಕಿ 6 ಲಕ್ಷ ರೂ.ಗಳನ್ನು ತರಬೇತಿ ವೆಚ್ಚಕ್ಕಾಗಿ ಬಳಸಲು ಅನುಮತಿ ನೀಡಿದೆ.

2009-10ನೇ ಸಾಲಿಗೆ ತರಬೇತಿ ವೆಚ್ಚಕ್ಕಾಗಿ 20 ಲಕ್ಷ ರೂ.ಗಳ ಅನುದಾನವನ್ನು ಕೋರಲಾಗಿದೆ.

**ತರಬೇತಿ ವೇಳಾಪಟ್ಟಿ:-**

2008-09 ನೇ ಸಾಲಿನಲ್ಲಿ ಫೆಬ್ರವರಿ 2009ರ ಅಂತ್ಯಕ್ಕೆ ವಿವಿಧ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ಒಟ್ಟು 21 ತಂಡಗಳಲ್ಲಿ ತರಬೇತಿ ನೀಡಲಾಯಿತು. ಆ ಪೈಕಿ ಮೈಸೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 6 ತಂಡಗಳು ಮಂಡ್ಯ ತರಬೇತಿ ಸಂಸ್ಥೆಯಲ್ಲಿ 6 ತಂಡಗಳು, ಹಾಸನ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 3 ತಂಡಗಳು ಮತ್ತು ಮಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 6 ತಂಡಗಳು ಒಟ್ಟು 21 ತಂಡಗಳಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸಲಾಯಿತು. ಎಲ್ಲಾ 21 ತರಬೇತಿ ಶಿಬಿರಗಳಲ್ಲಿ ಒಟ್ಟು 716 "ಸಿ" ವೃಂದದ ನೌಕರರುಗಳಿಗೆ ಕಂದಾಯ ಇಲಾಖೆಗೆ ಸಂಬಂಧಿಸಿದ ಪುಟ 2 ರಲ್ಲಿ ಪಟ್ಟಿ ಮಾಡಿರುವ ವಿಷಯಗಳ ಕುರಿತು ತರಬೇತಿ ನೀಡಲಾಯಿತು.

**ಶಿಬಿರಾರ್ಥಿಗಳಿಗೆ ವಾಸ್ತವ್ಯ ಮತ್ತು ಊಟೋಪಚಾರದ ವ್ಯವಸ್ಥೆ:-**

ಈ ಕಛೇರಿಯಿಂದ ಆಯೋಜಿಸಲ್ಪಟ್ಟ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ತರಬೇತಿ ಕೇಂದ್ರಗಳಲ್ಲಿ ವಾಸ್ತವ್ಯ ಮಾಡಲು ಅವಕಾಶ ಕಲ್ಪಿಸುವುದರ ಜೊತೆಗೆ ತರಬೇತಿಯ ಅವಧಿಯಲ್ಲಿ ಊಟ ಮತ್ತು ಉಪಹಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

## 2009-10 ನೇ ಸಾಲಿನ ಕಾರ್ಯಕ್ರಮ:

ಪ್ರಥಮ ಹಂತದ ತರಬೇತಿಯನ್ನು ಪಡೆದುಕೊಳ್ಳಲು ಬಾಕಿ ಇರುವ ಸುಮಾರು 3214 ನೌಕರರುಗಳಿಗೆ 2009-10 ನೇ ಸಾಲಿನ ಪೂರ್ವಾರ್ಧದಲ್ಲಿ ತರಬೇತಿಯನ್ನು ಪೂರ್ಣಗೊಳಿಸಲು ಸಿದ್ದತೆಯನ್ನು ಮಾಡಿಕೊಳ್ಳಲಾಗುತ್ತಿದೆ.

ಮೊದಲನೇ ಹಂತದಲ್ಲಿ ತರಬೇತಿಗೆ ಆಯ್ದುಕೊಂಡ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳನ್ನು ಆದ್ಯತೆಗೆ ಅನುಗುಣವಾಗಿ ಆಯ್ಕೆ ಮಾಡಿಕೊಂಡು 2009-10 ನೇ ಸಾಲಿನ ಉತ್ತರಾರ್ಧದಲ್ಲಿ ತರಬೇತಿಯನ್ನು ಪೂರ್ಣಗೊಳಿಸಲು ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ.

2009-10ನೇ ಸಾಲಿನ ದ್ವಿತೀಯಾರ್ಧದಲ್ಲಿ ಆಯ್ದುಕೊಳ್ಳಲು ಉದ್ದೇಶಿಸಿರುವ ಪ್ರಮುಖ ವಿಷಯಗಳು ಈ ಕೆಳಕಂಡಂತಿದೆ.

1. ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ವಿಶೇಷವಾಗಿ ಭೂ ಮಾಪನ ವಿಷಯಗಳ ಕುರಿತು ಪ್ರಾಯೋಗಿಕ ತರಬೇತಿ
2. ನ್ಯಾಯಾಲಯದ ಪ್ರಕರಣದ ಕುರಿತು ಕಂಡಿಕೆವಾರು ಉತ್ತರ, ಅನುಸರಣಾ ಕ್ರಮ ತೆಗೆದುಕೊಳ್ಳುವ ಕುರಿತು.
3. ಜಮಾಬಂದಿ ನಡೆಸುವ ಕುರಿತು ( ಅನುಸರಿಸಬೇಕಾದ ಕ್ರಮಗಳ ಕುರಿತು ನಿರ್ವಹಿಸಬೇಕಾದ ವಹಿಗಳು ಮತ್ತು ಲೆಕ್ಕಪತ್ರಗಳು )
4. ನೀರು ತೆರಿಗೆ ಮತ್ತು ನಿರ್ವಹಣಾ ಕರ ನಿಗಧಿಪಡಿಸುವಲ್ಲಿ ಕಂದಾಯ ಇಲಾಖೆ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿ
5. ಭೂ ಸ್ವಾಧೀನ ಪ್ರಕರಣಗಳಲ್ಲಿ ಕರಡು ಐ ತೀರ್ಪು ತಯಾರಿಕೆಗೆ ಪೂರಕವಾದ ಕ್ರಮಗಳು
6. ಭೂ ಸ್ವಾಧೀನ ಕಾಯ್ದೆ 18ರ ಪ್ರಕಾರ ಹೆಚ್ಚುವರಿ ಪರಿಹಾರ ಅಪೇಕ್ಷಿಸಿ ಸಲ್ಲಿಸಲ್ಪಡುವ ಅರ್ಜಿಗಳ ಕುರಿತು ಅನುಸರಿಸಬೇಕಾದ ಕ್ರಮಗಳು
7. ಕಾಯ್ದೆ ಕಲಂ 28(A) ರನ್ವಯ ನ್ಯಾಯಾಲಯದ ಆದೇಶದ ರೀತ್ಯಾ ಪರಿಹಾರ ಪುನರ್‌ನಿಗಧಿಪಡಿಸುವ ಕ್ರಮ
8. ಹೆಚ್ಚುವರಿ ಪರಿಹಾರ ನಿಗಧಿಪಡಿಸಿ ನ್ಯಾಯಾಲಯವು ನೀಡುವ ತೀರ್ಪಿನ ಮೇಲೆ ಅನುಸರಿಸಬೇಕಾದ ಸಕಾಲಿಕ ಕ್ರಮಗಳು
9. ಮಾಜಿ ಭೂ ಮಾಲೀಕರಿಗೆ ಭೂ ಸುಧಾರಣಾ ಕಾಯ್ದೆಯಡಿ ಪರಿಹಾರ ಪಾವತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳು (ಕಲಂ 51)
10. ಹೆಚ್ಚುವರಿ ಭೂಮಿಯನ್ನು ಹಂಚಿಕೆ ಕುರಿತು ಅನುಸರಿಸಬೇಕಾದ ಕ್ರಮಗಳು
11. ಚುನಾವಣೆ ಪ್ರಕ್ರಿಯೆಯಲ್ಲಿ ಕಂದಾಯ ಇಲಾಖೆಯ ನೌಕರರ ಕರ್ತವ್ಯ ಮತ್ತು ಜವಾಬ್ದಾರಿಗಳು
12. ಇದರ ಜೊತೆಗೆ ಗಣಕಯಂತ್ರದ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ.

**ಅನುದಾನ:-**

ತರಬೇತಿ ಶಿಬಿರಗಳ ಆಯೋಜನೆಗಾಗಿ 2009-10 ನೇ ಸಾಲಿನಲ್ಲಿ 3.60 ಲಕ್ಷರೂ.ಗಳ ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿ, ಸರ್ಕಾರವು ಈ ಕಛೇರಿಗೆ ನೀಡಲಾದ ಯೋಜನೇತರ ವೆಚ್ಚದ ಅನುದಾನದ ಪೈಕಿ ರೂ.3.60 ಗಳನ್ನು ತರಬೇತಿ ವೆಚ್ಚಕ್ಕಾಗಿ ಬಳಸಲು ಅನುಮತಿ ನೀಡಿದೆ.

2009-10 ನೇ ಸಾಲಿನ ತರಬೇತಿ ವೇಳಾಪಟ್ಟಿಯನ್ನು ಜಿಲ್ಲಾ ತರಬೇತಿ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಿಗಳೊಂದಿಗೆ ಸಮಾಲೋಚಿಸಿ ರೂಪಿಸಲಾಯಿತು. 2009-10 ನೇ ಸಾಲಿನಲ್ಲಿ ಮೇಲೆ ಹೇಳಿದ ವಿಷಯಗಳನ್ನು ಅಳವಡಿಸಿ ತರಬೇತಿ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗುತ್ತಿದೆ.

2009-10ನೇ ಸಾಲಿನಲ್ಲಿ ನವೆಂಬರ್ 2009ರ ಅಂತ್ಯಕ್ಕೆ ವಿವಿಧ ಜಿಲ್ಲಾ ತರಬೇತಿ ಸಂಸ್ಥೆಗಳು ಒಟ್ಟು 13 ತಂಡಗಳು ತರಬೇತಿ ನೀಡಲಾಯಿತು. ಆ ಪೈಕಿ ಮೈಸೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 3 ತಂಡಗಳು, ಹಾಸನ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 4 ತಂಡಗಳು ಮತ್ತು ಮಂಗಳೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 3 ತಂಡಗಳು ಒಟ್ಟು 439 " ಸಿ " ವೃಂದದ ನೌಕರರುಗಳಿಗೆ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಪುಟ 2 ರಲ್ಲಿ ಪಟ್ಟಿ ಮಾಡಿರುವ ವಿಷಯಗಳ ಕುರಿತು ತರಬೇತಿ ನೀಡಲಾಯಿತು.

**ಅನುದಾನ:-**

ತರಬೇತಿ ಶಿಬಿರಗಳ ಆಯೋಜನೆಗಾಗಿ 2010-11 ನೇ ಸಾಲಿನಲ್ಲಿ 6.00 ಲಕ್ಷ ರೂ.ಗಳ ಅನುದಾನವನ್ನು ನೀಡುವಂತೆ ಸರ್ಕಾರದ ಪ್ರಸ್ತಾವನೆ ಸಲ್ಲಿಸಲಾಗಿ, ಸರ್ಕಾರವು ಈ ಕಛೇರಿಗೆ ನೀಡಲಾದ ಯೋಜನೇತರ ವೆಚ್ಚದ ಅನುದಾನದ ಪೈಕಿ ರೂ.6.00 ಗಳನ್ನು ತರಬೇತಿ ವೆಚ್ಚಕ್ಕಾಗಿ ಬಳಸಲು ಅನುಮತಿ ನೀಡಿದೆ.

ಬಾಕಿ ಇರುವ ಸುಮಾರು 2775 ನೌಕರರಿಗೆ 2010-11 ನೇ ಸಾಲಿನಲ್ಲಿ ತರಬೇತಿ ಶಿಬಿರಿಗಳ ಆಯೋಜನೆಗಾಗಿ 2010-11 ನೇ ಸಾಲಿಗೆ ರೂ.3.60 ಗಳ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರವು ಈ ಕಛೇರಿಗೆ ಯೋಜನೇತರ ವೆಚ್ಚದ ಅನುದಾನದಲ್ಲಿ ಪೈಕಿ ರೂ.3.60 ಗಳನ್ನು ತರಬೇತಿ ವೆಚ್ಚಕ್ಕಾಗಿ ಬಳಸಲು ಅನುಮತಿ ನೀಡಿದೆ.

2010-11 ನೇ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಕಂದಾಯ ವಿಷಯಗಳು ಹಾಗೂ ಗಣಕಯಂತ್ರ ತರಬೇತಿಯನ್ನು (LMS & FMS, R.M.I.S., e - attendance ) ಮಾರ್ಚ್ 2011ರ ಅಂತ್ಯಕ್ಕೆ ಮೈಸೂರು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 12 ತಂಡಗಳಲ್ಲಿಯೂ ಮತ್ತು ಮಂಡ್ಯ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ 7 ತಂಡಗಳಲ್ಲಿ ಒಟ್ಟು 19 ತಂಡಗಳಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿತ್ತು. ಎಲ್ಲಾ 19 ತರಬೇತಿ ಶಿಬಿರಗಳಲ್ಲಿ ಒಟ್ಟು 378 " ಸಿ " ವೃಂದದ ನೌಕರರುಗಳಿಗೆ ಗಣಕಯಂತ್ರದ ತರಬೇತಿ ನೀಡಲಾಯಿತು.

## ಸಂಪನ್ಮೂಲ ವ್ಯಕ್ತಿಗಳು:-

ಕಂದಾಯ ಇಲಾಖೆಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ವಿಭಾಗದ ನಾಲ್ಕು ಕೇಂದ್ರಗಳಲ್ಲಿ ಆಯೋಜಿಸಲಾಗಿದ್ದ ತರಬೇತಿ ಶಿಬಿರಗಳಲ್ಲಿ ಶಿಬಿರಾರ್ಥಿಗಳಿಗೆ ವಿವಿದ ವಿಷಯಗಳ ಕುರಿತು ಮಾಹಿತಿ ಒದಗಿಸಲು ಇಲಾಖೆಯ ತಹಶೀಲ್ದಾರ್ ಹಾಗೂ ತಹಶೀಲ್ದಾರ್ ಹುದ್ದೆಗೆ ಮೇಲ್ಪಟ್ಟ ದರ್ಜೆಯ ಅಧಿಕಾರಿಗಳನ್ನು ಅತಿಥಿ ಉಪನ್ಯಾಸಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಲಾಗುತ್ತಿದೆ. ವಿಭಾಗದ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇಲಾಖೆಯ ಎಲ್ಲಾ ವೃಂದದ ಅಧಿಕಾರಿಗಳಿಗೆ ಪತ್ರ ಬರೆದು ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಳ್ಳುವಂತೆ ಸೂಚಿಸಲಾಗಿದೆ. ಅಲ್ಲದೆ, ವಿವಿಧ ವಿಷಯಗಳ ಕುರಿತು ಅತಿಥಿ ಉಪನ್ಯಾಸ ನೀಡಲು ಜಿಲ್ಲಾ ತರಬೇತಿ ಸಂಸ್ಥೆಗಳು ಆಹ್ವಾನಿಸಿದಾಗ ಕಡ್ಡಾಯವಾಗಿ ಈ ಆಹ್ವಾನವನ್ನು ಮನ್ನಿಸುವಂತೆ ಅವರುಗಳಿಗೆ ಸೂಚನೆ ನೀಡಲಾಗಿದೆ. ಇದರಿಂದಾಗಿ ಅತಿಥಿ ಉಪನ್ಯಾಸ ನೀಡಬೇಕಾದ ಇಲಾಖೆಯ ಅಧಿಕಾರಿಗಳು ಸಹ ಇಲಾಖೆಯ ವಿವಿಧ ವಿಷಯಗಳ ಬಗ್ಗೆ ಪುನರ್ ಮನನ ಮಾಡಿಕೊಳ್ಳಲು ಅವಕಾಶ ಒದಗಿದಂತಾಗಿದೆ.